## <u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.</u>

**ಸಿ.ಸಿ. ಸಂಃ 1175/2019**

| | | |
|---|---|---|
| ಸಾಕ್ಷಿಯ ಹೆಸರುಃ | ಮಹೇಂದ್ರ | ಪ್ರಾಸಾಃಃ 1 |
| ತಂದೆಯ ಹೆಸರುಃ | ಲೇಟ್ ಗಿಡ್ಡೇಗೌಡ | ಚಾಸಾಃಃ 3 |
| ವಯಸ್ಸುಃ | 45 ವರ್ಷ | ಪ್ರಮಾಣೀಕರಿಸಿದ<br>ದಿಃ 28.06.2023. |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ಮುದ್ದನಹಳ್ಳಿ ಗ್ರಾಮ, ಪಿರಿಯಾಪಟ್ಟಣ | |

**<u>ಮುಖ್ಯ ವಿಚಾರಣೆಃ ಸಸಅ ರಿಂದಃ</u>**

ನನಗೆ ಚಾಸಾ-1 ಮತ್ತು ಆರೋಪಿಯ ಪರಿಚಯ ಇರುತ್ತದೆ. ಚಾಸಾ-4 ನನ್ನ ಮಗ. ನನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿರುವುದಿಲ್ಲ. ನಾನು ಯಾವುದೇ ಗಲಾಟೆಯನ್ನು ಕಣ್ಣಾರೆ ಕಂಡಿರುವುದಿಲ್ಲ. ಆರೋಪಿಯು ನನಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುವುದಿಲ್ಲ. ಆ ಸಂಬಂಧ ಪೊಲೀಸ್ ರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಪೊಲೀಸ್ ನನ್ನ ಸಮಕ್ಷಮ ಯಾವುದೇ ಮಹಜರ್ ಜರುಗಿಸಿರುವುದಿಲ್ಲ ಮತ್ತುಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ.

ಸಾಕ್ಷಿಯು ಮಹಜರ್ ನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುಸಿರುತ್ತಾರೆ. ಮಹಜರನ್ನು ನಿಪಿ - 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ - 1(ಎ) ಎಂದು ಗುರುತಿಲಾಯಿತು. ನಿಪಿ - 1 ಕ್ಕೆ ನಾನು ಈಗ್ಗೆ 4 ವರ್ಷದ ಹಿಂದೆ ಯಾವುದೋ ಕೆಲಸದ ಮೇರೆಗೆ ಪೊಲೀಸ್ ಠಾಣೆಗೆ ಹೋಗಿದ್ದಾಗ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ. ನಿಪಿ - 1 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ.

**(ಈ ಸಮಯದಲ್ಲಿ ಸಹಾಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ**

**ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು.)**

ಪಾಟೀ ಸವಾಲುಃ ಸಸಅ ರವರಿಂದಃ

ಚಾಸಾ-2 ರವರಿಗೆ ಸೇರಿದ ಸರ್ವೆ ನಂಬರ್ 67/7 ಜಮೀನಿನಲ್ಲಿ ನಾನು ದಿ. 20.02.2019 ರಂದು ಬೆಳಿಗ್ಗೆ 08.00 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-4 ಮತ್ತು 5 ರವರು ಬ್ಯಾರನ್ ಮನೆಯ ಸಾಮಾನುಗಳನ್ನು ತೆಗೆದು ಗುಡ್ಡೆ ಮಾಡುತ್ತಿದ್ದಾಗ ಈ ಕೇಸಿನ ಆರೋಪಿ ಗೋವಿಂದೇಗೌಡ ರವರು ಅಲ್ಲಿಗೆ ಬಂದು ಚಾಸಾ-2 ಎಂ.ಡಿ. ರಘು ರವರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ನನಗೆ ಸೂಳೇ ಮಕ್ಕಳಾ ಯಾಕೆ ಇಲ್ಲಿ ಬ್ಯಾರನ್ ಮನೆ ಸಾಮಾನುಗಳನ್ನು ಕಿತ್ತು ಹಾಕುತ್ತಿದ್ದಿಯಾ ಎಂದು ಅವಾಚ್ಯವಾಗಿ ನಿಂದಿಸಿದರು ಎಂದರೆ ಸರಿಯಲ್ಲ. ನಂತರ ಕೈಯಲ್ಲಿದ್ದ ದೊಣ್ಣೆಯಿಂದ ನನಗೆ ಹೊಡೆಯಲು ಬಂದಾಗ ನಾನು ತಪ್ಪಿಸಿಕೊಂಡು ಓಡುತ್ತಿದ್ದಾಗ ನನ್ನನ್ನು ಹಿಂಬಾಲಿಸಿಕೊಂಡು ಓಡಿಸಿಕೊಂಡು ಹೋಗುತ್ತಿದ್ದಾಗ ಅಲ್ಲೇ ಇದ್ದ ಚಾಸಾ-1 ಪುಟ್ಟಮ್ಮ ರವರು ಏಕೆ ಅವರಿಗೆ ಹೊಡೆಯೋಕೆ ಹೊಗುತ್ತಿದ್ದಿಯಾ, ಬೇಕಾದರೆ ನಿನ್ನ ಸಾಮಾನುಗಳನ್ನು ನೀನು ತೆಗೆದುಕೊಂಡು ಹೋಗು ಎಂದು ಹೇಳಿಳಿದ್ದಕ್ಕೆ ಚಾಸಾ-1 ರವರನ್ನು ಉದ್ದೇಶಿಸಿ ಮುಂಡೆ ನಿನ್ನಿಂದಲೇ ಇದೆಲ್ಲ ಆಗುತ್ತಾ ಇರೋದು ಎಂದು ಅವಾಚ್ಯವಾಗಿ ನಿಂದಿಸಿದರು ಎಂದರೆ ಸರಿಯಲ್ಲ. ನಂತರ ಕೈಯಲ್ಲಿದ್ದ ದೊಣ್ಣೆಯಿಂದ ಚಾಸಾ-1 ರವರ ಎಡದ ಕೈಗೆ ಹೊಡೆದು ಕೆಳಕ್ಕೆ ನೂಕಿದ ಪರಿಣಾಮ ಚಾಸಾ-1 ರವರ ಎಡ ಮುಂಗೈ ಮತ್ತು ಸೊಂಟದ ಕೆಳಭಾಗ ಮತ್ತು ಬೆನ್ನಿನ ಹಿಂಭಾಗಕ್ಕೆ ನೊವುಂಟು ಮಾಡಿದರು ಎಂದರೆ ಸರಿಯಲ್ಲ. ನಂತರ ಅಲ್ಲೇ ಇದ್ದ ನಾನು, ಚಾಸಾ-4 ಮತ್ತು 6 ರವರು ಜಗಳ ಬಿಡಿಸಿದೇವು ಎಂದರೆ ಸರಿಯಲ್ಲ. ನಂತರ ನಾವುಗಳು ಚಾಸಾ-1 ರವರನ್ನು ಸುಧಾರಿಸುತ್ತಿದ್ದಾಗ, ಆರೋಪಿ ಚಾಸಾ-1 ರವರಿಗೆ ಹೊಡೆದ ದೊಣ್ಣೆಯಿಂದ ಚಾಸಾ-6 ರವರ ಸೊಂಟಕ್ಕೆ ಹೊಡದನು ಎಂದರೆ ಸರಿಯಲ್ಲ. ನಂತರ ಏಟಾಗಿದ್ದ ಚಾಸಾ-1 ಪುಟ್ಟಮ್ಮ ರವರನ್ನು ಒಂದು ಆಟೋದಲ್ಲಿ ನಾನು, ಚಾಸಾ-4 ಮತ್ತು 5 ರವರು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಸೇರಿಸಿದೇವು ಎಂದರೆ ಸರಿಯಲ್ಲ. ಆ ಬಗ್ಗೆ ನಾನು ಪೊಲೀಸ್ ರ ಮುಂದೆ ನಿ.ಪಿ.2 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿ. 21.02.2019 ರಂದು ಪೊಲೀಸ್ ರು ಮಾಲಂಗಿ ಗ್ರಾಮದ ಚಾಸಾ-2 ರವರ ಸರ್ವೆ ನಂಬರ್ 67/7 ಜಮೀನಿನ ಬಳಿ ಬಂದಾಗ ನಾನು ಪೊಲೀಸ್ ರಿಗೆ ಸ್ಥಳ ತೋರಿಸಿಕೊಟ್ಟ ಮೇರೆಗೆ ಪೊಲೀಸ್ ರು ನನ್ನ ಮತ್ತು ಚಾಸಾ-6 ಮತ್ತು 7 ರವರ ಸಮಕ್ಷಮ ಈಗ ಓದಿ ಕೇಳಿಸಿಕೊಂಡ ನಿ.ಪಿ. 2 ರಂತೆ ಸ್ಥಳ ಮಹಜರ್ ಕ್ರಮ ಜರುಗಿಸಿ ಆರೋಪಿಯು ಹಲ್ಲೆ ಮಾಡಲು ಉಪಯೋಗಿಸಿದ ದೊಣ್ಣೆಯನ್ನು ಮುಂದಿನ ಕ್ರಮಕ್ಕಾಗಿ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ ಮತ್ತು

ಸ್ಥಳದಲ್ಲಿ ನನ್ನ ಸಹಿಯನ್ನು ಪಡೆದುಕೊಂಡರು ಎಂದರೆ ಸರಿಯಲ್ಲ. ನಿ.ಪಿ. 1 ಮತ್ತು 2ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

ಸಿ.ನ್ಯಾ ಹಾಗೂ ಪ್ರ.ವ.ನ್ಯಾದಂ.
ಪಿರಿಯಾಪಟ್ಟಣ.

## ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

**ಸಿ.ಸಿ. ಸಂಃ 1175/2019**

| | | |
|---|---|---|
| ಸಾಕ್ಷಿಯ ಹೆಸರುಃ | ರವಿಕುಮಾರ | ಪ್ರಾಸಾಃಃ 2 |
| ತಂದೆಯ ಹೆಸರುಃ | ಮಹೇಂದ್ರ | ಚಾಸಾಃಃ 4 |
| ವಯಸ್ಸುಃ | 21 ವರ್ಷ | ಪ್ರಮಾಣೀಕರಿಸಿದ ದಿಃ 28.06.2023. |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ಮುದ್ದನಹಳ್ಳಿ ಗ್ರಾಮ, ಪಿರಿಯಾಪಟ್ಟಣ | |

**ಮುಖ್ಯ ವಿಚಾರಣೆಃ ಸಸಅ ರಿಂದಃ**

ನನಗೆ ಚಾಸಾ-1 ಮತ್ತು ಆರೋಪಿಯ ಪರಿಚಯ ಇರುತ್ತದೆ. ಚಾಸಾ-3 ನನ್ನ ತಂದೆ. ನನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿರುವುದಿಲ್ಲ. ನಾನು ಯಾವುದೇ ಗಲಾಟೆಯನ್ನು ಕಣ್ಣಾರೆ ಕಂಡಿರುವುದಿಲ್ಲ. ಆರೋಪಿಯು ಚಾಸಾ-3 ರವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುವುದಿಲ್ಲ. ಆ ಸಂಬಂಧ ಪೊಲೀಸ್ ರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಸಮಯದಲ್ಲಿ ಸಹಾಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು.)**

ಪಾಟೀ ಸವಾಲುಃ ಸಸಅ ರವರಿಂದಃ

ಚಾಸಾ-2 ರವರಿಗೆ ಸೇರಿದ ಸರ್ವೆ ನಂಬರ್ 67/7 ಜಮೀನಿನಲ್ಲಿ ನಾನು ದಿ. 20.02.2019 ರಂದು ಬೆಳಿಗ್ಗೆ 08.00 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-3 ಮತ್ತು 5 ರವರು ಬ್ಯಾರನ್ ಮನೆಯ ಸಾಮಾನುಗಳನ್ನು ತೆಗೆದು ಗುಡ್ಡೆ ಮಾಡುತ್ತಿದ್ದಾಗ ಈ ಕೇಸಿನ ಆರೋಪಿ ಗೋವಿಂದೇಗೌಡ ರವರು ಅಲ್ಲಿಗೆ ಬಂದು ಚಾಸಾ-2 ಎಂ.ಡಿ. ರಘು ರವರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಚಾಸಾ-3 ರವರಿಗೆ ಸೂಳೇ ಮಕ್ಕಳಾ ಯಾಕೆ ಇಲ್ಲಿ ಬ್ಯಾರನ್ ಮನೆ ಸಾಮಾನುಗಳನ್ನು ಕಿತ್ತು ಹಾಕುತ್ತಿದ್ದಿಯಾ ಎಂದು ಅವಾಚ್ಯವಾಗಿ ನಿಂದಿಸಿದರು ಎಂದರೆ ಸರಿಯಲ್ಲ. ನಂತರ ಕೈಯಲ್ಲಿದ್ದ

ದೊಣ್ಣೆಯಿಂದ ಚಾಸಾ-3 ರವರಿಗೆ ಹೊಡೆಯಲು ಬಂದಾಗ ಚಾಸಾ-3 ರವರು ತಪ್ಪಿಸಿಕೊಂಡು ಓಡುತ್ತಿದ್ದಾಗ ಚಾಸಾ-3 ರವರನ್ನು ಹಿಂಬಾಲಿಸಿಕೊಂಡು ಓಡಿಸಿಕೊಂಡು ಹೋಗುತ್ತಿದ್ದಾಗ ಅಲ್ಲೇ ಇದ್ದ ಚಾಸಾ-1 ಪುಟ್ಟಮ್ಮ ರವರು ಏಕೆ ಅವರಿಗೆ ಹೊಡೆಯೋಕೆ ಹೊಗುತ್ತಿದ್ದಿಯಾ, ಬೇಕಾದರೆ ನಿನ್ನ ಸಾಮಾನುಗಳನ್ನು ನೀನು ತೆಗೆದುಕೊಂಡು ಹೋಗು ಎಂದು ಹೇಳಿಳಿದ್ದಕ್ಕೆ ಚಾಸಾ-1 ರವರನ್ನು ಉದ್ದೇಶಿಸಿ ಮುಂಡೆ ನಿನ್ನಿಂದಲೇ ಇದೆಲ್ಲ ಆಗುತ್ತಾ ಇರೋದು ಎಂದು ಅವಾಚ್ಯವಾಗಿ ನಿಂದಿಸಿದರು ಎಂದರೆ ಸರಿಯಲ್ಲ. ನಂತರ ಕೈಯಲ್ಲಿದ್ದ ದೊಣ್ಣೆಯಿಂದ ಚಾಸಾ-1 ರವರ ಎಡದ ಕೈಗೆ ಹೊಡೆದು ಕೆಳಕ್ಕೆ ನೂಕಿದ ಪರಿಣಾಮ ಚಾಸಾ-1 ರವರ ಎಡ ಮುಂಗೈ ಮತ್ತು ಸೊಂಟದ ಕೆಳಭಾಗ ಮತ್ತು ಬೆನ್ನಿನ ಹಿಂಭಾಗಕ್ಕೆ ನೊವುಂಟು ಮಾಡಿದರು ಎಂದರೆ ಸರಿಯಲ್ಲ. ನಂತರ ಅಲ್ಲೇ ಇದ್ದ ನಾನು, ಚಾಸಾ-3 ಮತ್ತು 6 ರವರು ಜಗಳ ಬಿಡಿಸಿದೇವು ಎಂದರೆ ಸರಿಯಲ್ಲ. ನಂತರ ನಾವುಗಳು ಚಾಸಾ-1 ರವರನ್ನು ಸುಧಾರಿಸುತ್ತಿದ್ದಾಗ, ಆರೋಪಿ ಚಾಸಾ-1 ರವರಿಗೆ ಹೊಡೆದ ದೊಣ್ಣೆಯಿಂದ ಚಾಸಾ-6 ರವರ ಸೊಂಟಕ್ಕೆ ಹೊಡದನು ಎಂದರೆ ಸರಿಯಲ್ಲ. ನಂತರ ಏಟಾಗಿದ್ದ ಚಾಸಾ-1 ಪುಟ್ಟಮ್ಮ ರವರನ್ನು ಒಂದು ಆಟೋದಲ್ಲಿ ನಾನು, ಚಾಸಾ-3 ಮತ್ತು 5 ರವರು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಸೇರಿಸಿದೇವು ಎಂದರೆ ಸರಿಯಲ್ಲ. ಆ ಬಗ್ಗೆ ನಾನು ಪೊಲೀಸ್ ರ ಮುಂದೆ ನಿ.ಪಿ.**3** ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ನಿ.ಪಿ. 3 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿದ್ದರೂ, ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯಿನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ **ಪರ ವಕೀಲರಿಂದಃ**

ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

ಸಿ.ನ್ಯಾ ಹಾಗೂ ಪ್ರ.ವ.ನ್ಯಾದಂ.
ಪಿರಿಯಾಪಟ್ಟಣ.

**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.</u>**

**ಸಿ.ಸಿ. ಸಂಃ 1175/2019**

| | | |
|---|---|---|
| ಸಾಕ್ಷಿಯ ಹೆಸರುಃ | ಹರೀಶ ಕುಮಾರ್ | ಫ್ರಾಸಾಃಃ 3 |
| ತಂದೆಯ ಹೆಸರುಃ | ಶಿವಲಿಂಗೇಗೌಡ | ಚಾಸಾಃಃ 6 |
| ವಯಸ್ಸುಃ | 23 ವರ್ಷ | ಪ್ರಮಾಣೀಕರಿಸಿದ ದಿಃ 28.06.2023. |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ಮಾಲಂಗಿ ಗೋಮಾಳ ಗ್ರಾಮ, ಪಿರಿಯಾಪಟ್ಟಣ | |

**<u>ಮುಖ್ಯ ವಿಚಾರಣೆಃ ಸಸಅ ರಿಂದಃ</u>**

ನನಗೆ ಚಾಸಾ-1 ಮತ್ತು ಆರೋಪಿಯ ಪರಿಚಯ ಇರುತ್ತದೆ. ನನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿರುವುದಿಲ್ಲ. ನಾನು ಯಾವುದೇ ಗಲಾಟೆಯನ್ನು ಕಣ್ಣಾರೆ ಕಂಡಿರುವುದಿಲ್ಲ. ಆರೋಪಿಯು ನನಗೆ ದೊಣ್ಣೆಯಿಂದ ಹೊಡೆದಿರುವುದಿಲ್ಲ. ಆ ಸಂಬಂಧ ಪೊಲೀಸ್ ರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಪೊಲೀಸ್ ರು ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ. ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯು ಸ್ಥಳ ಮಹಜರ್ ನ್ನು ನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ. 1 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.1(ಬಿ)** ಎಂದು ಗುರುತಿಸಲಾಯಿತು. ನಿ.ಪಿ. 1 ಕ್ಕೆ ಸುಮಾರು 5 ವರ್ಷಗಳ ಹಿಂದೆ ಪೊಲೀಸ್ ಠಾಣೆಯಲ್ಲಿ ಪೊಲೀಸರ ಕೊರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸ್ ರು ಓದಿ ತಿಳಿಸಿರುವುದಿಲ್ಲ.

**(ಈ ಸಮಯದಲ್ಲಿ ಸಹಾಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ**

**ನೀಡಲಾಯಿತು.)**

<u>ಪಾಟೀ ಸವಾಲುಃ ಸಸಅ ರವರಿಂದಃ</u>

ದಿ. 20.02.2019 ರಂದು ಬೆಳಿಗ್ಗೆ 08.00 ಗಂಟೆ ಸಮಯದಲ್ಲಿ ನಾನು, ಚಾಸಾ-3 ಮತ್ತು 4 ರವರು ಚಾಸಾ-2 ರವರಿಗೆ ಸೇರಿದ ಸರ್ವೆ ನಂಬರ್ 67/7 ರ ಬ್ಯಾರನ್ ಮನೆಯ ಸಾಮಾನುಗಳನ್ನು ತೆಗೆದು ಗುಡ್ಡೆ ಮಾಡುತ್ತಿದ್ದಾಗ ಈ ಕೇಸಿನ ಆರೋಪಿ ಗೋವಿಂದೇಗೌಡ ರವರು ಅಲ್ಲಿಗೆ ಬಂದು ಚಾಸಾ-2 ಎಂ.ಡಿ. ರಘು ರವರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಚಾಸಾ3 ರವರಿಗೆ ಸೂಳೇ ಮಕ್ಕಳಾ ಯಾಕೆ ಇಲ್ಲಿ ಬ್ಯಾರನ್ ಮನೆ ಸಾಮಾನುಗಳನ್ನು ಕಿತ್ತು ಹಾಕುತ್ತಿದ್ದಿಯಾ ಎಂದು ಅವಾಚ್ಯವಾಗಿ ನಿಂದಿಸಿದರು ಎಂದರೆ ಸರಿಯಲ್ಲ. ನಂತರ ಕೈಯಲ್ಲಿದ್ದ ದೊಣ್ಣೆಯಿಂದ ಚಾಸಾ-3 ರವರಿಗೆ ಹೊಡೆಯಲು ಬಂದಾಗ ಚಾಸಾ-3 ರವರು ತಪ್ಪಿಸಿಕೊಂಡು ಓಡುತ್ತಿದ್ದಾಗ ಚಾಸಾ-3 ರವರನ್ನು ಹಿಂಬಾಲಿಸಿಕೊಂಡು ಓಡಿಸಿಕೊಂಡು ಹೋಗುತ್ತಿದ್ದಾಗ ಅಲ್ಲೇ ಇದ್ದ ಚಾಸಾ-1 ಪುಟ್ಟಮ್ಮ ರವರು ಏಕೆ ಅವರಿಗೆ ಹೊಡೆಯೋಕೆ ಹೊಗುತ್ತಿದ್ದಿಯಾ, ಬೇಕಾದರೆ ನಿನ್ನ ಸಾಮಾನುಗಳನ್ನು ನೀನು ತೆಗೆದುಕೊಂಡು ಹೋಗು ಎಂದು ಹೇಳಿಳಿದ್ದಕ್ಕೆ ಚಾಸಾ-1 ರವರನ್ನು ಉದ್ದೇಶಿಸಿ ಮುಂಡೆ ನಿನ್ನಿಂದಲೇ ಇದೆಲ್ಲ ಆಗುತ್ತಾ ಇರೋದು ಎಂದು ಅವಾಚ್ಯವಾಗಿ ನಿಂದಿಸಿದರು ಎಂದರೆ ಸರಿಯಲ್ಲ. ನಂತರ ಕೈಯಲ್ಲಿದ್ದ ದೊಣ್ಣೆಯಿಂದ ಚಾಸಾ-1 ರವರ ಎಡದ ಕೈಗೆ ಹೊಡೆದು ಕೆಳಕ್ಕೆ ನೂಕಿದ ಪರಿಣಾಮ ಚಾಸಾ-1 ರವರ ಎಡ ಮುಂಗೈ ಮತ್ತು ಸೊಂಟದ ಕೆಳಭಾಗ ಮತ್ತು ಬೆನ್ನಿನ ಹಿಂಭಾಗಕ್ಕೆ ನೊವುಂಟು ಮಾಡಿದರು ಎಂದರೆ ಸರಿಯಲ್ಲ. ನಂತರ ಅಲ್ಲೇ ಇದ್ದ ನಾನು, ಚಾಸಾ-3 ಮತ್ತು 6 ರವರು ಜಗಳ ಬಿಡಿಸಿದೇವು ಎಂದರೆ ಸರಿಯಲ್ಲ. ನಂತರ ನಾವುಗಳು ಚಾಸಾ-1 ರವರನ್ನು ಸುಧಾರಿಸುತ್ತಿದ್ದಾಗ, ಆರೋಪಿಯು ನನಗೆ ದೊಣ್ಣೆಯಿಂದ ನನ್ನ ಸೊಂಟಕ್ಕೆ ಹೊಡದನು ಎಂದರೆ ಸರಿಯಲ್ಲ. ನಂತರ ಏಟಾಗಿದ್ದ ಚಾಸಾ-1 ಪುಟ್ಟಮ್ಮ ರವರನ್ನು ಒಂದು ಆಟೋದಲ್ಲಿ ನಾನು, ಚಾಸಾ-3 ಮತ್ತು 5 ರವರು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಸೇರಿಸಿದೇವು ಎಂದರೆ ಸರಿಯಲ್ಲ. ಆ ಬಗ್ಗೆ ನಾನು ಪೊಲೀಸ್ ರ ಮುಂದೆ ನಿ.ಪಿ.**4** ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿ. 21.02.2019 ರಂದು ಪೊಲೀಸ್ ರು ಮಾಲಂಗಿ ಗ್ರಾಮದ ಚಾಸಾ-2 ರವರ ಸರ್ವೆ ನಂಬರ್ 67/7 ಜಮೀನಿನ ಬಳಿ ಬಂದಾಗ ಚಾಸಾ-3 ರವರು ಪೊಲೀಸ್ ರಿಗೆ ಸ್ಥಳ ತೋರಿಸಿಕೊಟ್ಟ ಮೇರೆಗೆ ಪೊಲೀಸ್ ರು ನನ್ನ ಮತ್ತು ಚಾಸಾ-3 ಮತ್ತು 7 ರವರ ಸಮಕ್ಷಮ ಈಗ ಓದಿ ಕೇಳಿಸಿಕೊಂಡ ನಿ.ಪಿ. 2 ರಂತೆ ಸ್ಥಳ ಮಹಜರ್ ಕ್ರಮ ಜರುಗಿಸಿ ಆರೋಪಿಯು ಹಲ್ಲೆ ಮಾಡಲು ಉಪಯೋಗಿಸಿದ ದೊಣ್ಣೆಯನ್ನು ಮುಂದಿನ ಕ್ರಮಕ್ಕಾಗಿ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ ಮತ್ತು ಸ್ಥಳದಲ್ಲಿ ನನ್ನ ಸಹಿಯನ್ನು ಪಡೆದುಕೊಂಡರು ಎಂದರೆ ಸರಿಯಲ್ಲ. ನಿ.ಪಿ. 1 ಮತ್ತು 4 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ **ಪರ ವಕೀಲರಿಂದಃ**

ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

ಸಿ.ನ್ಯಾ ಹಾಗೂ ಪ್ರ.ವ.ನ್ಯಾದಂ.
ಪಿರಿಯಾಪಟ್ಟಣ.